Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 27/2021

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಶಿವಲಿಂಗಪ್ಪ |
| ತಂದೆಯ ಹೆಸರು | : | ಲಿಂಗಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿಎಸಐ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 27-01-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2016 ರಿಂದ 2021ರ ವರೆಗೆ ಯಾದಗಿರಿ ಗ್ರಾಮೀಣ ಪೊಲೀಸಠಾಣೆಯಲ್ಲಿ ಎಎಸಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 30-03-2021 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 11-30 ಪಿಎಸಐ ರವರ ಆದೇಶದ ಮೇರೆಗೆ ಹಳ್ಳಿಗಳ ಬೇಟಿ ಕುರಿತು ಮುದ್ನಾಳ ಗ್ರಾಮಕ್ಕೆ ಹೋದೆನು. ಗ್ರಾಮದಲ್ಲಿ ಅಲ್ಲಿ ಸಾರ್ವಜನಿಕರು ಮತ್ತು ಪೊಲೀಸ ಬಾತ್ಮಿದಾರರನ್ನು ವಿಚಾರಣೆ ಮಾಡಿ ಕೊವೀಡ್-19 2 ನೇ ಅಲೆ ಇದ್ದಾಗ ಡಿ.ಸಿ. ಅವರ ಆದೇಶದ ಮೇರೆಗೆ ಹಬ್ಬ ಹರಿದಿನಗಳು ಆಚರಿಸುವ ಸಂದರ್ಭಗಳಲ್ಲಿ ಆದೇಶ ಪಾಲನೆ ಮಾಡಬೇಕು ಎಂದು ಆದೇಶ ಮಾಡಿದ್ದರು. ಅದೇ ಸಮಯದಲ್ಲಿ ಮಧ್ಯಾಹ್ನ 12-45 ಗಂಟೆಗೆ ಪೊಲೀಸ ಬಾತ್ಮಿದಾರರು ಮಾನಸಪ್ಪ ತಂದೆ ಯಲ್ಲಪ್ಪ ವಡ್ಡರ ಇವರ ಮನೆಯ ಹಿಂದುಗಡೆ ಕೈ ತೋಟದಲ್ಲಿ ತರಕಾರಿ ಮಧ್ಯದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದಾರೆ ಮತ್ತು ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು ಮತ್ತು ಸೇವನೆ ಮಾಡುತ್ತಿದ್ದ ಎಂದು ತಿಳಿಸಿದರು. ನಾನು ಗೌಪ್ಯವಾಗಿ ಸ್ಥಳ ಪರಿಶೀಲನೆ ಮಾಡಿದೆ. ಅಲ್ಲಿ ಗಾಂಜಾ ಗಿಡ ಬೆಳೆದಿದ್ದು ಕಂಡು ಬಂತು. ನಂತರ ಮಧ್ಯಾಹ್ನ 2-00 ಗಂಟೆಗೆ ಠಾಣೆಗೆ ಬಂದು ಪಿಎಸಐ ರವರಿಗೆ ಮಾಹಿತಿ ಕೊಟ್ಟೆ. ಈ ಬಗ್ಗೆ ವರದಿಯನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ಆಗ ನೋಡಲಿಲ್ಲ.

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಎಮ್.ವಿ.ಕೆ ವಕೀಲರಿಂದ

3. ಆಗ 2 ನೇ ಕೋವಿಡ್ ಅಲೆ ಇತ್ತು. ಸಾರ್ವಜನಿಕರು ಓಡಾಡುವದನ್ನು ನಿರ್ಬಂದಿಸಿದ್ದರು. ಪಿಎಸಐ ಅವರು ಮೌಖಿಕ ಆದೇಶ ಮಾಡಿದ್ದರು. ಮುಮೆಂಟ ರಜೀಸ್ಟರನಲ್ಲಿ ಈ ಬಗ್ಗೆ ನಮೂದು ಮಾಡಿಲ್ಲ. ಆ ಜಾಗದ ಸರ್ವೆ ನಂಬರ ಗೊತ್ತಿಲ್ಲ.

4. ದಿಃ 30-03-2021 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 11-30 ಪಿಎಸಐ ರವರ ಆದೇಶದ ಮೇರೆಗೆ ಹಳ್ಳಿಗಳ ಬೇಟಿ ಕುರಿತು ಮುದ್ನಾಳ ಗ್ರಾಮಕ್ಕೆ ಹೋದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಅಲ್ಲಿ ಸಾರ್ವಜನಿಕರು ಮತ್ತು ಪೊಲೀಸ ಬಾತ್ಮಿದಾರರನ್ನು ವಿಚಾರಣೆ ಮಾಡಿ ಕೊವೀಡ್-19 2 ನೇ ಅಲೆ ಇದ್ದಾಗ ಡಿ.ಸಿ. ಅವರ ಆದೇಶದ ಮೇರೆಗೆ ಹಬ್ಬ ಹರಿದಿನಗಳು ಆಚರಿಸುವ ಸಂದರ್ಭಗಳಲ್ಲಿ ಆದೇಶ ಪಾಲನೆ ಮಾಡಬೇಕು ಎಂದು ಆದೇಶ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಮಧ್ಯಾಹ್ನ 12-45 ಗಂಟೆಗೆ ಪೊಲೀಸ ಬಾತ್ಮಿದಾರರು ಮಾನಸಪ್ಪ ತಂದೆ ಯಲ್ಲಪ್ಪ ವಡ್ಡರ ಇವರ ಮನೆಯ ಹಿಂದುಗಡೆ ಕೈ ತೋಟದಲ್ಲಿ ತರಕಾರಿ ಮಧ್ಯದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದಾರೆ ಮತ್ತು ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು ಮತ್ತು ಸೇವನೆ ಮಾಡುತ್ತಿದ್ದ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೌಪ್ಯವಾಗಿ ಸ್ಥಳ ಪರಿಶೀಲನೆ ಮಾಡಿದೆ. ಅಲ್ಲಿ ಗಾಂಜಾ ಗಿಡ ಬೆಳೆದಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 2-00 ಗಂಟೆಗೆ ಠಾಣೆಗೆ ಬಂದು ಪಿಎಸಐ ರವರಿಗೆ ಮಾಹಿತಿ ಕೊಟ್ಟೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕಿ ಅಂಶಕ್ಕಾಗಿ ಮೇಲಾಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.